ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಈಗ ಏನು ಅಧಿಕಾರಿಗಳು ತಪ್ಪು ಮಾಡಿರುತ್ತಾರೆ ಅವರಿಗೆ ಶಿಕ್ಷೆ ಕೊಡುತ್ತಿರುವುದು ಸಾಲದು. ಅವರಿಗೆ ಇನ್ನೂ ಉಗ್ರವಾಗಿ ಶಿಕ್ಷೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕಾಗಿಯೇ ಕಾನೂನನ್ನೆ ತಿದ್ದುಪಡಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

Raising Toll rates by Srirangapatna Town Municipality

584 Sri M. SREENIVAS (Srirangapatna).—Will the Minister for Municipal Administration be pleased to state:

(a) whether the Town Municipality of Srirangapatna has raised the Municipal toll rates for bullock carts, Jataka, Cycle etc;

(b) if so, whether enhancing of the toll rates has caused hardship to the poor and weaker section of the society;

(c) whether it has come to the notice of Government that this enhancement is beyond the payable, capacity of the very large number of people?

Sri H. C. SRIKANTAIAH (Minister for Municipal Administration).—(a) Yes.

(b) The enhancement was in excess of the powers of the Town Municipal Council and has such might have caused hardship.

(c) No representation have been received in this behalf. However, the levy was in excess of the rates prescribed and accordingly, it was irregular and has been withdrawn.

ಶ್ರೀ ಎಂ. ಶ್ರೀನಿವಾಸ.—ಸ್ವಾಮಿ, ಪ್ರಶ್ನೆಯನ್ನು ಕಳುಹಿಸಿದ ಮೇಲೆ ಆದನ್ನು ರದ್ದು ಮಾಡಿದ್ದೇವೆಂದು ಹೇಳಿರುತ್ತೀರಿ, ಆದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ರೀತಿ ಎಷ್ಟು ಕಾಲದಿಂದ ವಸೂಲು ಮಾಡುತ್ತಿರುತ್ತಾರೆ ಎಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ.

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—೧ನೇ ಏಪ್ರಿಲ್ ೧೯೭೮ ರಿಂದ ೨೫ನೇ ಜುಲೈ ೧೯೭೮ರವರೆಗೆ ಈ ರೀತಿ ವಸೂಲು ಮಾಡುತ್ತಿದ್ದರು.

ಶ್ರೀ ಎಂ. ಶ್ರೀನಿವಾಸ್.—ಬಡಜನರ ಮೇಲೆ ಈ ರೀತಿ ತೊಂದರೆ ಕೊಡುತ್ತಿದ್ದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್.—ಆ ಕಾಲದಲ್ಲಿ ಹೆಚ್ಚಿಗೆ ವಸೂಲು ಮಾಡಿರತಕ್ಕ ದುಡ್ಡನ್ನು ಜನರಿಗೆ ವಾಪಸ್ ಕೊಡಿಸುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈ ಹಣ ಪುರಸಭೆಗೆ ಸೇರಿಹೋಗಿದೆ. ಆದ್ದರಿಂದ ವಾಪಸ್ ಕೊಡಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಮುಂದೆ ಈ ರೀತಿ ಆಗದಹಾಗೆ ನೋಡಿಕೊಳ್ಳಬೇಕೇ ಹೊರತು ವಾಪಸ್ ಕೊಡಿಸುವುದಕ್ಕೆ ಸಾಧ್ಯವಾಗುವುದಿಲ್ಲ.